ಕರ್ನಾಟಕ ಸರ್ಕಾರ

ಖಜಾನೆ ಆಯುಕ್ತರ ಕಾರ್ಯಾಲಯ

ರಾಷ್ಟ್ರೀಯ ಪಿಂಚಣಿ ಯೋಜನೆ ಘಟಕ, 5ನೇ ಮಹಡಿ, ಕೆ. ಪಿ. ಸಿ. ಎಲ್, ಗ್ರೀನ್ ಬಿಲ್ಡಿಂಗ್, ಪ್ಯಾಲೇಸ್ ರಸ್ತೆ,

ಬೆಂಗಳೂರು-560001 ಇ-ಮೇಲ್:nps-cell@karnataka.gov.in, ದೂರವಾಣಿ ಸಂಖ್ಯೆ: 080-22864180

---

ಸಂಖ್ಯೆ.DOT-NPS0ADM(DOT)/2/2020/e-303052 ದಿನಾಂಕ:01.12.2023

ರಾಜ್ಯದ ಎಲ್ಲಾ ಖಜಾನೆಗಳ ಪ್ರಭಾರಾಧಿಕಾರಿಗಳಿಗೆ,

ಮಾನ್ಯರೆ,

ವಿಷಯ: ಅರ್ಹ ಎನ್.ಪಿ.ಎಸ್. ಅಧಿಕಾರಿ/ನೌಕರರಿಗೆ ಡಿ.ಸಿ.ಆರ್.ಜಿ, ಪಿಂಚಣಿ ಹಾಗೂ ಕುಟುಂಬ ಪಿಂಚಣಿ ಪರಿವರ್ತನೆಗಾಗಿ ನಮೂನೆಗಳನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: 1)ಸರ್ಕಾರದ ಆದೇಶ ಸಂಖ್ಯೆ:ಆಇ-ಪಿಇಎನ್/161/2022, ದಿನಾಂಕ:17.09.2022.

2)ಸರ್ಕಾರದ ಆದೇಶ ಸಂಖ್ಯೆ:ಆಇ-ಪಿಇಎನ್/149/2022, ದಿನಾಂಕ:19.10.2022.

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಸರ್ಕಾರಿ ಆದೇಶದಲ್ಲಿ ರಾಷ್ಟ್ರೀಯ ಪಿಂಚಣಿ ಯೋಜನೆಯಿಂದ ಹಿಂದಿನ ಡಿಫೈನ್ಡ್ ಪಿಂಚಣಿ ಯೋಜನೆಗೆ ಒಳಪಡುವ ಅಧಿಕಾರಿ/ನೌಕರರು ನಿವೃತ್ತಿ ಹೊಂದಿದಾಗ/ಸೇವೆಯಲ್ಲಿರುವಾಗಲೇ ಮರಣ ಹೊಂದಿರುವ/ಈಗಾಗಲೇ ನಿವೃತ್ತಿ ಹೊಂದಿ ಮರಣ ಹೊಂದಿರುವ ಪ್ರಕರಣಗಳಲ್ಲಿ ಅವರುಗಳ ಪ್ರಾನ್ ಖಾತೆಯಲ್ಲಿರುವ ಮೊತ್ತವನ್ನು ಇತ್ಯರ್ಥಪಡಿಸಿ, ನಿವೃತ್ತ ನೌಕರರಿಗೆ ಹಾಗೂ ಮೃತರ ನಾಮನಿರ್ದೇಶಿತರಿಗೆ ಪಿಂಚಣಿ/ಕುಟುಂಬ ಪಿಂಚಣಿಯನ್ನು ಹಾಗೂ ಡಿ.ಸಿ.ಆರ್.ಜಿ. ಸೌಲಭ್ಯವನ್ನು ಇತ್ಯರ್ಥಪಡಿಸುವ ಕುರಿತು ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ.

ದಿನಾಂಕ:01.04.2006ರ ತದನಂತರ ಸರ್ಕಾರಿ ಸೇವೆಗೆ ನೇಮಕಾತಿ ಹೊಂದುವ, ರಾಷ್ಟ್ರೀಯ ಪಿಂಚಣಿ ಯೋಜನೆಗೆ ಒಳಪಡುವ ನೌಕರರು ಸೇವೆಯಲ್ಲಿರುವಾಗಲೇ ಮರಣ ಹೊಂದಿರುವ ಪ್ರಕರಣಗಳಲ್ಲಿ ಉಲ್ಲೇಖ (2) ರ ಸರ್ಕಾರಿ ಆದೇಶದಲ್ಲಿ ಕುಟುಂಬ ಪಿಂಚಣಿ ಹಾಗೂ ಡಿ.ಸಿ.ಆರ್.ಜಿ ಸೌಲಭ್ಯಗಳನ್ನುಇತ್ಯರ್ಥಪಡಿಸುವ ಕುರಿತು ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ.

ಈ ಸಂಬಂಧ ನಿವೃತ್ತ ಅಧಿಕಾರಿ/ನೌಕರರ ಅಥವಾ ಸೇವೆಯಲ್ಲಿರುವಾಗಲೇ ಮೃತರಾದ ನೌಕರರ ಪ್ರಾನ್ ಖಾತೆಯಲ್ಲಿರುವ ಮೊತ್ತ ಹಾಗೂ ಇಡಿಗಂಟಿನ ಪರಿಹಾರದ ಮೊತ್ತವನ್ನು ಇತ್ಯರ್ಥಪಡಿಸಿರುವ/ಇತ್ಯರ್ಥಪಡಿಸಿಲ್ಲದ ಬಗ್ಗೆ ಖಚಿತ ಪಡಿಸಿಕೊಂಡು ವಿಳಂಬಕ್ಕೆ ಅಸ್ಪದವಿಲ್ಲದೇ ಸದರಿ ಪ್ರಕರಣಗಳನ್ನು ತ್ವರಿತವಾಗಿ ತೀರ್ಣಗೊಳಿಸಲು ಅನುಕೂಲವಾಗುವಂತೆ ಮೇಲಿನ ಉಲ್ಲೇಖಿತ ಆದೇಶಗಳನ್ವಯ ಅನುಬಂಧಗಳನ್ನು ಹಾಗೂ ನಮೂನೆಗಳನ್ನು ಡಿಡಿಓ ಮತ್ತು ಖಜಾನಾಧಿಕಾರಿಗಳು ದೃಢೀಕರಿಸಿ ಸಲ್ಲಿಸಬೇಕಿರುತ್ತದೆ. ಮುಂದುವರೆದು ಖಜಾನಾಧಿಕಾರಿಗಳು ಕುಟುಂಬ ಪಿಂಚಣಿಗಾಗಿ ನಮೂನೆ-6 ಹಾಗೂ ಹಿಂದಿನ ಡಿಫೈನ್ಡ್ ಪಿಂಚಣಿ ಯೋಜನೆಗಾಗಿ ನಮೂನೆ-9 ರಲ್ಲಿ ಸ್ಪಷ್ಟವಾಗಿ ನಮೂದಿಸಿ ಎಲ್ಲಾ ದಾಖಲೆಗಳು ಸರಿಯಿದೆ ಎಂದು ಖಚಿತಪಡಿಸಿಕೊಂಡು ನಿಯಮನುಸಾರ ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

ತಮ್ಮ ನಂಬುಗೆಯ,

ಅರುಂಧತಿ

ಖಜಾನೆ ಆಯುಕ್ತರು

ಖಜಾನೆ ಆಯುಕ್ತರ ಕಚೇರಿ,

ಬೆಂಗಳೂರು.

ಪ್ರತಿಯನ್ನು: ಸಹಾಯಕ ನಿರ್ದೇಶಕರು, ಪಿಎಂಯು ಘಟಕ, ಖಜಾನೆ ಆಯುಕ್ತಾಲಯ ಇವರಿಗೆ ಖಜಾನೆ ನೆಟ್ ನಲ್ಲಿ ಪ್ರಕಟಿಸಲು.

Scanned with AnyScanner

# ನಮೂನೆ-6

**ಸರ್ಕಾರದ ಆದೇಶ ಸಂಖ್ಯೆ:ಆಇ-ಪಿಇಎನ್/149/2022, ದಿನಾಂಕ:19.10.2022 ರನ್ವಯ ಖಜಾನಾಧಿಕಾರಿಗಳವರು ಕುಟುಂಬ ಪಿಂಚಣಿ ಪರಿವರ್ತನೆಗಾಗಿ ಸಲ್ಲಿಸಬೇಕಾದ ಚೆಕ್‌ಲಿಸ್ಟ್.**

| ಕ್ರ. ಸಂ | ವಿಷಯ | ಷರಾ |
|---|---|---|
| 01 | ಅಧಿಕಾರಿ/ನೌಕರರ ಹೆಸರು ಮತ್ತು ಪದನಾಮ | |
| 02 | ಪ್ರಾನ್ ಸಂಖ್ಯೆ | |
| 03 | ಅಧಿಕಾರಿ/ನೌಕರರು ಮರಣ ಹೊಂದಿದ ದಿನಾಂಕ | |
| 04 | ಇಡಿಗಂಟಿನ ಪರಿಹಾರವನ್ನು ಖಜಾನೆಯಲ್ಲಿ ಪಾವತಿ ಮಾಡಲಾಗಿದೆಯೇ? | |
| 05 | ಟೋಕನ್ ನಂಬರ್ ವೋಚರ್ ನಂಬರ್ ಮತ್ತು ದಿನಾಂಕ, SOP Report ಲಗತ್ತಿಸಲಾಗಿದೆಯೇ? | |
| 06 | ಇಡಗಂಟಿನ ಪರಿಹಾರವನ್ನು ಪಾವತಿಸಿದ್ದಲ್ಲಿ ಸರ್ಕಾರದ ಲೆಕ್ಕ ಶೀರ್ಷಿಕೆ 2071-01-911-0-06 ಗೆ ಜಮೆ ಮಾಡಲಾಗಿದೆಯೇ? | |
| 07 | ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಿದ ಚಲನ್ ಅನ್ನು ಡಿಡಿಓರವರಿಂದ ದೃಢೀಕರಿಸಿ ಲಗತ್ತಿಸಲಾಗಿದೆಯೇ? | |
| 08 | ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಿದ ಸಂಬಂಧ KTC-25 ಅನ್ನು ಖಜಾನಾಧಿಕಾರಿಗಳಿಂದ ದೃಢೀಕರಿಸಿ ಲಗತ್ತಿಸಲಾಗಿದೆಯೇ? | |
| 09 | ಇಡಗಂಟಿನ ಪರಿಹಾರವನ್ನು ಪಾವತಿಸದಿದ್ದಲ್ಲಿ ಡಿಡಿಓರವರಿಂದ "ಪಾವತಿಸಿಲ್ಲ" (Non Payment) ಎಂದು ದೃಢೀಕರಣ ಪಡೆದು ಲಗತ್ತಿಸಲಾಗಿದೆಯೇ? | |
| 10 | ಸೇವೆಯಲ್ಲಿರುವಾಗಲೇ ಮೃತರಾದ ಅಧಿಕಾರಿ/ನೌಕರರ ನಾಮನಿರ್ದೇಶಿತರಿಗೆ ಪ್ರಾನ್ ಖಾತೆಯಲ್ಲಿರುವ ಮೊತ್ತವನ್ನು ಈ ಕೆಳಗಿನ ಯಾವ ಮಾರ್ಗಸೂಚಿಯಂತೆ ಇತ್ಯರ್ಥಪಡಿಸಲಾಗಿದೆ?* | |
| A | ಪ್ರಾನ್ ಖಾತೆಯಲ್ಲಿರುವ 100% ಮೊತ್ತವನ್ನು (2.5 ಲಕ್ಷ/5.00 ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ) ಇತ್ಯರ್ಥಪಡಿಸಲಾಗಿದೆಯೇ?<br>i. ಪಾವತಿಸಿದ ಮೊತ್ತ ಮತ್ತು ದಿನಾಂಕ | ............................................ |
| B | ಶೇ.20ರಷ್ಟು ಇತ್ಯರ್ಥಪಡಿಸಿ ಶೇ.80ರಷ್ಟು ಮೊತ್ತ ASPಯಲ್ಲಿ ಹೂಡಿಕೆ ಮಾಡಿಲ್ಲವೇ?<br>i. ಪ್ರಾನ್ ಖಾತೆಯಿಂದ ಶೇ.20ರಷ್ಟು ಪಾವತಿಸಿದ ಮೊತ್ತ ಮತ್ತು ದಿನಾಂಕ | ............................................ |
| C | ಶೇ.20ರಷ್ಟು ಇತ್ಯರ್ಥಪಡಿಸಿ ಶೇ.80ರಷ್ಟು ಮೊತ್ತ ASPಯಲ್ಲಿ ಹೂಡಿಕೆ ಮಾಡಿಲಾಗಿದೆಯೇ?**<br>i. ಪಾವತಿಸಿದ ಮೊತ್ತ ಮತ್ತು ದಿನಾಂಕ<br>ii. ಶೇ.80ರಷ್ಟು ಹೂಡಿಕೆ ಮಾಡಿದ ಮೊತ್ತ ಮತ್ತು ASP ಹೆಸರು | ............................................<br>............................................ |
| D | ಪ್ರಾನ್ ಖಾತೆಯ ಮೊತ್ತ ಇದುವರೆವಿಗೂ ಪಾವತಿಸಿಲ್ಲವೇ? | |

ಪ್ರಾನ್ ಸಂಖ್ಯೆ____________________ಅನ್ನು ಎನ್.ಪಿ.ಎಸ್ ನಿಂದ ಕುಟುಂಬ ಪಿಂಚಣಿಗೆ ಮಾರ್ಪಡಿಸಿರುವ ಸಂಬಂಧ ಮೃತರ ನಾಮನಿರ್ದೇಶಿತರಾದ ಶ್ರೀಮತಿ/ಶ್ರೀ ------------------ ರವರು ನೀಡಿರುವ ಎಲ್ಲಾ ನಮೂನೆಗಳನ್ನು ಪರಿಶೀಲಿಸಿ ಸರಿಯಿದೆ ಎಂದು ಖಚಿತಪಡಿಸಿದೆ.

ದಿನಾಂಕ: ಖಜಾನಾಧಿಕಾರಿಗಳ ಸಹಿ ಹಾಗೂ

ಸ್ಥಳ: ಕಚೇರಿ ಮೊಹರು.

*ಸಂಬಂಧಪಟ್ಟ ಪ್ರಾನ್‌ದಾರರ SOT ನ್ನು ಪರಿಶೀಲಿಸಿ ಮಾಹಿತಿಯನ್ನು ಖಚಿತಪಡಿಸುವುದು

** ಹೂಡಿಕೆ ಪತ್ರ (ASP) ಪರಿಶೀಲಿಸಿ ಮಾಹಿತಿಯನ್ನು ಖಚಿತಪಡಿಸಿಕೊಳ್ಳುವುದು

Scanned with AnyScanner

## ನಮೂನೆ-9

ಸರ್ಕಾರದ ಆದೇಶ ಸಂಖ್ಯೆ: ಆಇ-ಪಿಇಎನ್/161/2022, ದಿನಾಂಕ:17.09.2022 ರನ್ವಯ ಖಜಾನಾಧಿಕಾರಿಗಳವರು ಡಿಫೈನ್ಡ್ ಪಿಂಚಣಿ ಯೋಜನೆಗೆ ಸಲ್ಲಿಸಬೇಕಾದ ಚೆಕ್‌ಲಿಸ್ಟ್. (ERM ಪ್ರಕ್ರಿಯೆ)

| ಕ್ರ. ಸಂ | ವಿಷಯ | ಷರಾ |
|---|---|---|
| I | **ಅಧಿಕಾರಿ/ನೌಕರರ ಹೆಸರು ಮತ್ತು ಪದನಾಮ** | |
| II | **ಪ್ರಾನ್ ಸಂಖ್ಯೆ** | |
| III | **ಸೇವೆಯಲ್ಲಿರುವಾಗಲೇ ಮೃತರಾದ ಅಧಿಕಾರಿ/ನೌಕರರ ಪ್ರಕರಣವೇ?** | |
| A | ಮರಣ ಹೊಂದಿದ ದಿನಾಂಕ | |
| B | ಇಡಿಗಂಟಿನ ಪರಿಹಾರವನ್ನು ಖಜಾನೆಯಲ್ಲಿ ಪಾವತಿ ಮಾಡಲಾಗಿದೆಯೇ? | |
| C | ಟೋಕನ್ ನಂಬರ್, ವೋಚರ್ ನಂಬರ್ ಮತ್ತು ದಿನಾಂಕ, SOP Report ಲಗತ್ತಿಸಲಾಗಿದೆಯೇ? | |
| D | ಇಡಗಂಟಿನ ಪರಿಹಾರವನ್ನು ಪಾವತಿಸಿದ್ದಲ್ಲಿ ಸರ್ಕಾರದ ಲೆಕ್ಕ ಶೀರ್ಷಿಕೆ 2071-01-911-0-06 ಗೆ ಜಮೆ ಮಾಡಲಾಗಿದೆಯೇ? | |
| E | ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಿದ ಚಲನ್ ಅನ್ನು ಡಿಡಿಓರವರಿಂದ ದೃಢೀಕರಿಸಿ ಲಗತ್ತಿಸಲಾಗಿದೆಯೇ? | |
| F | ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಿದ ಸಂಬಂಧ KTC-25 ಅನ್ನು ಖಜಾನಾಧಿಕಾರಿಗಳಿಂದ ದೃಢೀಕರಿಸಿ ಲಗತ್ತಿಸಲಾಗಿದೆಯೇ? | |
| G | ಇಡಗಂಟಿನ ಪರಿಹಾರವನ್ನು ಪಾವತಿಸದಿದ್ದಲ್ಲಿ ಡಿಡಿಓರವರಿಂದ "ಪಾವತಿಸಿಲ್ಲ" (Non Payment) ಎಂದು ದೃಢೀಕರಣ ಪಡೆದು ಲಗತ್ತಿಸಲಾಗಿದೆಯೇ? | |
| H | ಅಧಿಕಾರಿ/ನೌಕರರ ನಾಮನಿರ್ದೇಶಿತರಿಗೆ ಪ್ರಾನ್ ಖಾತೆಯಲ್ಲಿರುವ ಮೊತ್ತವನ್ನು ಈ ಕೆಳಗಿನ ಯಾವ ಮಾರ್ಗಸೂಚಿಯಂತೆ ಇತ್ಯರ್ಥಪಡಿಸಲಾಗಿದೆ?* | |
| 1 | ಮೃತ ನಾಮನಿರ್ದೇಶಿತರಿಗೆ ಈಗಾಗಲೇ CRA ಯವರು ಪ್ರಾನ್ ಖಾತೆಯಿಂದ ಶೇ.20ರಷ್ಟು ಇತ್ಯರ್ಥಪಡಿಸಿ ಶೇ.80ರಷ್ಟು ಮೊತ್ತವನ್ನು ASP ಯಲ್ಲಿ ಹೂಡಿಕೆ ಮಾಡಿಲಾಗಿದೆಯೇ? **<br>a. ಶೇ. 20 ರಷ್ಟು ಇತ್ಯರ್ಥಪಡಿಸಿ ಪಾವತಿಸಿದ ಮೊತ್ತ ಮತ್ತು ದಿನಾಂಕ<br>b. ಶೇ. 80 ರಷ್ಟು ಹೂಡಿಕೆ ಮಾಡಿದ ಮೊತ್ತ ಮತ್ತು ASP ಹೆಸರು | <br><br>..............................................<br>.............................................. |
| 2 | ಶೇ.20ರಷ್ಟು ಇತ್ಯರ್ಥಪಡಿಸಿ ಶೇ.80ರಷ್ಟು ಮೊತ್ತ ASPಯಲ್ಲಿ ಹೂಡಿಕೆ ಮಾಡಿಲ್ಲವೇ?<br>a. ಶೇ. 20 ರಷ್ಟು ಇತ್ಯರ್ಥಪಡಿಸಿ ಪಾವತಿಸಿದ ಮೊತ್ತ ಮತ್ತು ದಿನಾಂಕ | <br>.............................................. |
| 3 | ಮೃತರ ಪ್ರಾನ್ ಖಾತೆಯಲ್ಲಿ ಶೇ. 100 ರಷ್ಟು ಮೊತ್ತವನ್ನು (2.5 ಲಕ್ಷ/5.00 ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ) ಇತ್ಯರ್ಥಪಡಿಸಲಾಗಿದೆಯೇ?<br>a. ಶೇ. 100 ರಷ್ಟು ಪಾವತಿಸಿದ ಮೊತ್ತ ಮತ್ತು ದಿನಾಂಕ | <br><br>.............................................. |
| 4 | CRA ಪ್ರಾನ್ ಖಾತೆಯಲ್ಲಿರುವ ಮೊತ್ತವನ್ನು ಇದುವರೆವಿಗೂ ಇತ್ಯರ್ಥಪಡಿಸಿಲ್ಲವೇ? | |
| IV | **ಹಿಂದಿನ ಡಿಫೈನ್ಡ್ ಪಿಂಚಣಿ ಯೋಜನೆಗೆ ಒಳಪಡುವ ಅಧಿಕಾರಿ/ನೌಕರರು ಸೇವೆಯಿಂದ ನಿವೃತ್ತಿಯಾಗಿ CRA ಖಾತೆಯಿಂದ ಇತ್ಯರ್ಥಪಡಿಸಿದ ನಂತರ ಮರಣ ಹೊಂದಿರುತ್ತಾರೆಯೇ? (Example 1998th Batch)** | |
| 1 | ಅಧಿಕಾರಿ/ನೌಕರರು ನಿವೃತ್ತಿ ಹೊಂದಿದ ದಿನಾಂಕ | |
| 2 | ಅಧಿಕಾರಿ/ನೌಕರರು ಮರಣ ಹೊಂದಿದ ದಿನಾಂಕ | |
| 3 | CRA ಪ್ರಾನ್ ಖಾತೆಯಲ್ಲಿರುವ ಮೊತ್ತವನ್ನು ಶೇ. 60% ಇತ್ಯರ್ಥಪಡಿಸಿ 40% ASP ಯಲ್ಲಿ ಹೂಡಿಕೆ ಮಾಡಲಾಗಿದೆಯೇ? ** | |

Scanned with AnyScanner

| | | |
|---|---|---|
| | a. ಶೇ. 60 ರಷ್ಟು ಇತ್ಯರ್ಥಪಡಿಸಿ ಪಾವತಿಸಿದ ಮೊತ್ತ ಮತ್ತು ದಿನಾಂಕ<br>b. ಶೇ. 40 ರಷ್ಟು ಹೂಡಿಕೆ ಮಾಡಿದ ಮೊತ್ತ ಮತ್ತು ASP ಹೆಸರು | ....................................<br>.................................... |
| 4 | ಅಧಿಕಾರಿ/ನೌಕರರ ಪ್ರಾನ್ ಖಾತೆಯಲ್ಲಿರುವ ಮೊತ್ತವನ್ನು ಶೇ. 60 ರಷ್ಟು ಇತ್ಯರ್ಥಪಡಿಸಿ ಶೇ. 40 ರಷ್ಟು ಹೂಡಿಕೆ ಮಾಡಿಲ್ಲವೇ?<br>a. ಶೇ. 60 ರಷ್ಟು ಇತ್ಯರ್ಥಪಡಿಸಿ ಪಾವತಿಸಿದ ಮೊತ್ತ ಮತ್ತು ದಿನಾಂಕ | .................................... |
| 5 | ಅಧಿಕಾರಿ/ನೌಕರರು ನಿವೃತ್ತಿ ಹೊಂದಿದಾಗ ಪ್ರಾನ್ ಖಾತೆಯಲ್ಲಿರುವ (5.00 ಲಕ್ಷಕ್ಕಿಂತ ಕಡಿಮೆ ಇದ್ದಾಗ) ಶೇ. 100 ರಷ್ಟು ಮೊತ್ತವನ್ನು ಇತ್ಯರ್ಥಪಡಿಸಲಾಗಿದೆಯೇ?<br>a. ಶೇ.100 ರಷ್ಟು ಇತ್ಯರ್ಥಪಡಿಸಿ ಪಾವತಿಸಿದ ಮೊತ್ತ ಮತ್ತು ದಿನಾಂಕ | .................................... |
| V | **ನಿವೃತ್ತಿ ಹೊಂದಿದ ನಂತರ ಅಧಿಕಾರಿ/ನೌಕರರಿಗೆ ಪ್ರಾನ್ ಖಾತೆಯಲ್ಲಿರುವ ಮೊತ್ತವನ್ನು ಈಗಾಗಲೇ ಪಾವತಿಸಲಾಗಿದೆಯೇ?** | |
| 1 | ಅಧಿಕಾರಿ/ನೌಕರರು ನಿವೃತ್ತಿ ಹೊಂದಿದ ದಿನಾಂಕ | |
| 2 | ಅಧಿಕಾರಿ/ನೌಕರರಿಗೆ ಈಗಾಗಲೇ ಶೇ.60 ರಷ್ಟು ಇತ್ಯರ್ಥಪಡಿಸಿ ಶೇ.40 ರಷ್ಟು ಹೂಡಿಕೆ ಮಾಡಲಾಗಿದೆಯೇ?**<br>a. ಶೇ. 60 ರಷ್ಟು ಇತ್ಯರ್ಥಪಡಿಸಿ ಪಾವತಿಸಿದ ಮೊತ್ತ ಮತ್ತು ದಿನಾಂಕ<br>b. ಶೇ. 40 ರಷ್ಟು ಹೂಡಿಕೆ ಮಾಡಿದ ಮೊತ್ತ ಮತ್ತುASP ಹೆಸರು | ....................................<br>.................................... |
| 3 | ಅಧಿಕಾರಿ/ನೌಕರರ ಪ್ರಾನ್ ಖಾತೆಯಲ್ಲಿರುವ ಮೊತ್ತವನ್ನು ಶೇ. 60 ರಷ್ಟು ಇತ್ಯರ್ಥಪಡಿಸಿ ಶೇ. 40 ರಷ್ಟು ಹೂಡಿಕೆ ಮಾಡಿಲ್ಲವೇ?<br>a. ಶೇ. 60 ರಷ್ಟು ಇತ್ಯರ್ಥಪಡಿಸಿ ಪಾವತಿಸಿದ ಮೊತ್ತ ಮತ್ತು ದಿನಾಂಕ | .................................... |
| 4 | ಅಧಿಕಾರಿ/ನೌಕರರು ನಿವೃತ್ತಿ ಹೊಂದಿದಾಗ ಪ್ರಾನ್ ಖಾತೆಯಲ್ಲಿರುವ (5.00 ಲಕ್ಷಕ್ಕಿಂತ ಕಡಿಮೆ ಇದ್ದಾಗ) ಶೇ. 100 ರಷ್ಟು ಮೊತ್ತವನ್ನು ಇತ್ಯರ್ಥಪಡಿಸಲಾಗಿದೆಯೇ?<br>a. ಶೇ.100 ರಷ್ಟು ಇತ್ಯರ್ಥಪಡಿಸಿ ಪಾವತಿಸಿದ ಮೊತ್ತ ಮತ್ತು ದಿನಾಂಕ | .................................... |

ಪ್ರಾನ್ ಸಂಖ್ಯೆ____________________ಅನ್ನು ಎನ್.ಪಿ.ಎಸ್ ನಿಂದ ಹಿಂದಿನ ಡಿಫೈನ್ಡ್ ಪಿಂಚಣಿಗೆ ಮಾರ್ಪಡಿಸಿರುವ ಸಂಬಂಧ ನಿವೃತ್ತ ಅಧಿಕಾರಿ/ನೌಕರರ/ಮೃತ ನಾಮನಿರ್ದೇಶಿತರಾದ ಶ್ರೀಮತಿ/ಶ್ರೀ ---------------------------- ರವರು ನೀಡಿರುವ ಎಲ್ಲಾ ನಮೂನೆಗಳನ್ನು ಪರಿಶೀಲಿಸಿ ಸರಿಯಿದೆ ಎಂದು ಖಚಿತಪಡಿಸಿದೆ.

ದಿನಾಂಕ:

ಸ್ಥಳ:

ಖಜಾನಾಧಿಕಾರಿಗಳ ಸಹಿ ಹಾಗೂ
ಕಚೇರಿ ಮೊಹರು.

* ಸಂಬಂಧಪಟ್ಟ ಪ್ರಾನ್‌ದಾರರ SOT ನ್ನು ಪರಿಶೀಲಿಸಿ ಮಾಹಿತಿಯನ್ನು ಖಚಿತಪಡಿಸುವುದು.

** ಹೂಡಿಕೆ ಪತ್ರ (ASP) ಪರಿಶೀಲಿಸಿ ಮಾಹಿತಿಯನ್ನು ಖಚಿತಪಡಿಸಿಕೊಳ್ಳುವುದು

Scanned with AnyScanner